# ಫೇಲಾಗಬಾರದು ಎಂದು ಓದುತ್ತಿದ್ದೆ, ಅಷ್ಟೇ...

ವೀಣಾ
ಉದಯದ 'ಗೌರಿಪುರದ ಗಯ್ಯಾಳಿಗಳು' ರೇಖಾ



◆ **ಅಭಿನಯದ ಆರಂಭ ಹೇಗಾಯಿತು?**

ನಟನೆಯ ಅನುಭವ ನನಗೆ ಇರಲಿಲ್ಲ. ನಾನೇ ಸ್ವಂತ ಕ್ರಿಯೇಟ್ ಮಾಡಿಕೊಂಡು ಕಲರ್ಸ್ ಕನ್ನಡದ 'ರೊಬೊ ಫ್ಯಾಮಿಲಿ'ಯ ಶೈಲೂ ಪಾತ್ರಕ್ಕೆ ಆಡಿಷನ್ ನೀಡಿದೆ. ಸಮರ್ಥವಾಗಿ ನಿಭಾಯಿಸುವ ಬಗ್ಗೆ ಆತಂಕ ಇತ್ತು. ಇದಕ್ಕೂ ಮೊದಲು ಸ್ಟಾರ್ ಸುವರ್ಣದಲ್ಲಿ 'ಪಡುವಾರಳ್ಳಿ ಪಡ್ಡೆಗಳು' ಹಾಸ್ಯ ಧಾರಾವಾಹಿಗಳನ್ನು ಒಂದೆರಡು ಕಂತು ಮಾಡಿದ್ದೆ. ನಂತರ ಉದಯದಲ್ಲಿ ಕಾಮಿಡಿ ಕಥೆಗೆ ಪಾತ್ರವನ್ನು ಮಾಡಿದೆ. ಇದರ ಜೊತೆಗೆ ಮೂರು ಸಿನಿಮಾಗಳಲ್ಲಿ ನಟಿಸಿದ್ದೇನೆ. ಶೈಲೂ ನನಗೆ ತುಂಬ ಹೆಸರು ತಂದುಕೊಟ್ಟ ಪಾತ್ರ.

◆ **ರೇಖಾ ಪಾತ್ರ ಹೇಗಿದೆ ಎಂದು ನಿಮಗೆ ಅನ್ನಿಸುತ್ತದೆ?**

ಒಂದು ರೀತಿಯ ವಿಚಿತ್ರ ಹುಡುಗಿ. ತುಂಬ ಬುದ್ಧಿವಂತೆಯೂ ಅಲ್ಲ, ಪೆದ್ದಿಯೂ ಅಲ್ಲ. ಹಾಗೆಯೇ ಭಾವ ಜೀವಿಯೂ ಅಲ್ಲ. ನಿರ್ಭಾವುಕಳೂ ಅಲ್ಲ. ಆದರೆ ಪಂಚ್ ಡೈಲಾಗ್ ಹೊಡೆಯುವುದರಲ್ಲಿ ಮಾತ್ರ ಮುಂದಿದ್ದಾಳೆ. ಮುಗ್ಧೆಯಂತೆ ಕಂಡರೂ ಮುಗ್ಧೆಯಲ್ಲ, ಹಾಗಂತ ಘಾಟಿನೂ ಅಲ್ಲ. ಬೇರೆ ಗಯ್ಯಾಳಿಗಳ ಪಾತ್ರಗಳಿಗೆ ಹೋಲಿಸಿದರೆ ಪೆದ್ದಿ. ಈ ಪಾತ್ರದ ಮೇಲೆ ಕಾಮಿಡಿ ಪ್ಲೇ ಆಗ್ತಾ ಇರುತ್ತದೆ. ಅಕ್ಕಪಕ್ಕದ ಪಾತ್ರಗಳ ಜೊತೆ ಡೈಲಾಗ್ ಹೊಡೆಯುವ ಮೂಲಕ ನಗೆಯನ್ನು ಹುಟ್ಟುಹಾಕುತ್ತದೆ. ಉದಾಹರಣೆಗೆ ಯಾರಾದರೂ ಅವಳಿಗೆ 'ಚಾಕುವಿನಿಂದ ಚುಚ್ಚುತ್ತೇನೆ ಅಂದರೆ, ಎಂತಹ ಚಾಕು, ಸ್ಟೀಲ್‌ದಾ ಕಬ್ಬಿಣದ್ದಾ? ಚೂಪಾಗಿರುತ್ತಾ, ಮೊಂಡಾಗಿರುತ್ತಾ' ಎಂದು ಮರು ಪ್ರಶ್ನಿಸುತ್ತಾಳೆ.

◆ **ಕಾಮಿಡಿಗೆ ಸ್ಟಿಕ್ ಆಗ್ತೀನಿ ಅಂತ ನಿಮಗೆ ಅನ್ನಿಸಿಲ್ವಾ?**

ನನಗೆ ಬರುತ್ತಿರುವ ಅವಕಾಶಗಳು ಹೆಚ್ಚು ಕಾಮಿಡಿ ಕಥೆಗಳಿಗೆ ಬರುತ್ತಿವೆ. ಮೂರು ಸಿನಿಮಾಗಳಲ್ಲಿ ಗಂಭೀರ ಪಾತ್ರಗಳನ್ನೂ ಮಾಡಿದ್ದೇನೆ. ಆದರೂ ಧಾರಾವಾಹಿಗಳಲ್ಲಿ ಇಂತಹದ್ದೇ ಬರ್ತಿವೆ. ನನಗೂ ಬದಲಾವಣೆ ಬೇಕು ಅಂತ ಅನ್ನಿಸಿದೆ. ಅದು ದುರಂತದ್ದೇ ಆಗಿರಲಿ, ಪೌರಾಣಿಕ–ಐತಿಹಾಸಿಕ ಯಾವುದೇ ಆಗಿರಲಿ. ವಿಶೇಷವಾಗಿ ನನ್ನ ಒಲವು ಪ್ರತಿಯೊಬ್ಬರಿಗೂ ಕನೆಕ್ಟ್ ಆಗುವಂತಹ ಪಾತ್ರಕ್ಕಿದೆ. ಅಂದರೆ ಸಾಮಾನ್ಯ ಗೃಹಿಣಿ ಆಗಿರಬೇಕು. ಆಕೆ ತನ್ನ ಮನೆಯನ್ನು ಜವಾಬ್ದಾರಿಯಿಂದ ನಿರ್ವಹಣೆ ಮಾಡುತ್ತಾಳೆ. ನಗುತ್ತಾಳೆ, ಅಳುತ್ತಾಳೆ, ಪ್ರೀತಿಸುತ್ತಾಳೆ, ದ್ವೇಷವನ್ನೂ ಮಾಡುತ್ತಾಳೆ. ತನ್ನ ಮತ್ತು ತನ್ನವರ ಬದುಕು ಕಟ್ಟಲು ನಿಜಕ್ಕೂ ಹೋರಾಡುತ್ತಾಳೆ. ಅಂತಹ ಪಾತ್ರವನ್ನು ನಾನು ಬಯಸುತ್ತಿದ್ದೇನೆ.

◆ **ನಿಮ್ಮ ಕುಟುಂಬದ ಬೆಂಬಲ ಹೇಗಿದೆ?**

ಮೇಲುಕೋಟೆ ಹತ್ತಿರದ ಹೊಸಕೋಟೆ ಅಮ್ಮನ ತವರು ಮನೆ. ನಾನು ಹೊಟ್ಟೆಯಲ್ಲಿ ಇದ್ದಾಗ ಆ ಊರಿಗೆ ಸಿನಿಮಾ ಚಿತ್ರೀಕರಣಕ್ಕೆ ಸೆಟ್ ಹಾಕಿದ್ದಾರೆ. ಅದನ್ನು ನೋಡಿದ ಅಮ್ಮ ನನ್ನ ಮಗುವೂ ಅಭಿನಯ ಕಲಿತರೆ ಹೀಗೆಲ್ಲ ಮಾಡಬಹುದು ಎಂದು ಆಶಿಸಿದ್ದರಂತೆ. ಅವರಿಗೆ ನಟನೆ ಬಗ್ಗೆ ಆಸಕ್ತಿ ಇತ್ತು. ಅವರ ಆ ಆಸೆಯನ್ನು ನನ್ನ ಮೂಲಕ ಈಡೇರಿಸಿಕೊಂಡಿದ್ದಾರೆ. ಆರಂಭದಲ್ಲಿ ಹುರಿದುಂಬಿಸಿದವರು ಅಮ್ಮ ಸಾವಿತ್ರಮ್ಮ.

ಓದುವಾಗ ನನಗೆ ಆಸೆ ಏನೂ ಇರಲಿಲ್ಲ. ಕೊನೆ ಬೆಂಚಿನ ವಿದ್ಯಾರ್ಥಿ. ಓದುವ ಪ್ರೇಮಿಯೂ ಅಲ್ಲ. ಫೇಲಾದರೆ ಜನ ಆಡಿಕೊಳ್ಳುತ್ತಾರೆ, ಪಾಸ್ ಆದರೆ ಸಾಕು ಎನ್ನುವ ಲೆಕ್ಕಾಚಾರದಲ್ಲಿಯೇ ಓದುತ್ತಿದ್ದೆ. ಫಸ್ಟ್ ಕ್ಲಾಸ್ ಸ್ಟೂಡೆಂಟ್ ಆಗಲಿಲ್ಲ. ದ್ವಿತೀಯ ದರ್ಜೆಯಲ್ಲಿ ಪಾಸಾಗುತ್ತಿದ್ದೆ. ಅಪ್ಪ ವೆಂಕಟೇಶ್ ಉದ್ಯಮಿ. ಹೊಸದಾಗಿ ಹೋಟೆಲ್ ಆರಂಭಿಸಬೇಕು ಎಂಬ ಯೋಚನೆಯಲ್ಲಿದ್ದಾರೆ. ನಾವು ಮೂವರು ಮಕ್ಕಳು ತಂಗಿ ಕೂಡ ನಟಿ. ತಮ್ಮ ನಟಿಸುವ ಆಸಕ್ತಿ ಇದೆ. ತಾಳ್ಮೆ ಇಲ್ಲ. ಹಾಗಾಗಿ ಬಿಜಿನೆಸ್ ಕಡೆ ಗಮನ ಕೊಟ್ಟಿದ್ದಾನೆ. ನನ್ನ ಪತಿ ಕಾರ್ತಿಕ್ ಕಲಾ ಆಸಕ್ತರು. ತಮಿಳು ಸಿನಿಮಾ ಒಂದಕ್ಕೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಕೋರಿಯೊಗ್ರಾಫರ್, ಡಾನ್ಸ್ ಮಾಡುತ್ತಾರೆ. ಈಗ ಒಂದು ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರೇ ಒಂದು ಸಿನಿಮಾ ಮಾಡುವ ಯೋಜನೆಯನ್ನು ಹೊಂದಿದ್ದಾರೆ. ವೃತ್ತಿ ಮತ್ತು ಹವ್ಯಾಸದಲ್ಲಿ ಸಮತೋಲವನ್ನು ಕಾಪಾಡುತ್ತಿದ್ದಾರೆ.

■ **ರಾಘವೇಂದ್ರ ಕೆ.**